ಸಿಸಿನಂ.160/2023

ಪಿಡಬ್ಲ್ಯೂ3

<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.</u>

ಸಿಸಿ ನಂ.160/2023

ಪಿಡಬ್ಲೂ : 3

| | | |
|---|---|---|
| ಹೆಸರು | : | ಶ್ರೀ ವಿನಾಯಕ |
| ತಂದೆಯ ಹೆಸರು | : | ಪುರುಷೋತ್ತಮ ನಾಯ್ಕ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಬ್ಯಾಂಕ ಮ್ಯಾನೇಜರ ಕೆಡಿಸಿಸಿ ಬ್ಯಾಂಕ ಕುಮಟಾ |
| ವಾಸ್ತವ್ಯ | : | ಕುಮಟಾ |
| ಸತ್ಯ ಪ್ರತಿಜ್ಞೆಯ ಮೇರೆಗೆ | : | ದಿನಾಂಕ 13-02-2026 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. |

**<u>ಮುಖ್ಯ ವಿಚಾರಣೆ : ಪಿರ್ಯಾದುದಾರರ ಪರವಾಗಿ</u> : <u>ಶ್ರೀ ಪಿ ಜಿ ಹೆಚ್ ವಕೀಲರಿಂದ</u> :**

ನಾನು ಕಳೆದ ಎರಡು ವರ್ಷಗಳಿಂದ ಕೆಡಿಸಿಸಿ ಬ್ಯಾಂಕ ಕುಮಟಾ ಶಾಖೆಯಲ್ಲಿ ಶಾಖಾ ವ್ಯವಸ್ಥಾಪಕನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. . ಈ ಎರಡು ವರ್ಷಗಳ ಹಿಂದೆ ನಾನು ಬೇರೆ ಹುದ್ದೆಯಲ್ಲಿ ಅದೇ ಶಾಖೆಯಲ್ಲಿ ಕೆಲಸ ಮಾಡಿದ್ದೇನೆ .

2. ನಿಪಿ-3 ನಮ್ಮ ಶಾಖೆಯಿಂದ ನೀಡಲಾಗಿರುವ ರಿರ್ಟನ ಮೆಮೋ ಆಗಿರುತ್ತದೆ . ಕೊಟ್ಟಂತಹ ಚೆಕ್ Funds in sufficient ಎಂದು ಹಿಂಬರಹ ಕೊಡಲಾಗಿದೆ . ಚೆಕ್ ನಂ . 115808 ಗೆ ಸಂಬಂಧಪಟ್ಟಂತೆ ಹಿಂಬರಹ ಕೊಡಲಾಗಿದೆ . ನಿಪಿ-2 ವಿಜಯಾ ಬ್ಯಾಂಕ ಕುಂದಾಪುರ ಶಾಖೆಯ ಚೆಕ್ ಆಗಿರುತ್ತದೆ . ಚೆಕ್ ನ ಮೇಲೆ ನಂಬರ 115808 ಇದೆ . ನಿಪಿ-2 ರ ಚೆಕ್ ನಮ್ಮ ಬ್ಯಾಂಕಿಗೆ ಕಲೆಕ್ಷನ್ ಗೆ ಬಂದಾಗ ನಾವು ಅದನ್ನು ಸಿಟಿಎಸ್ ಸಿಸ್ಟಮ್ ನಲ್ಲಿ ಸ್ಕ್ಯಾನ್ ಮಾಡಿ ಚನ್ನೈ ಗ್ರಿಡ್ ಗೆ ಕಳಿಸಿರುತ್ತೇವೆ . ಸಂಬಂಧಪಟ್ಟ ಬ್ಯಾಂಕನವರು ಅದನ್ನು ಪರಿಶೀಲಿಸಿ Funds in sufficient ಎಂದು ಮಾಹಿತಿಯನ್ನು ನೀಡಿದರು . ಆ ಮಾಹಿತಿ ಪ್ರಕಾರ ನಾವು

ನಿಪಿ–3 ಹಿಂಬರಹವನ್ನು ಯಾರು ಚೆಕ್ ನ್ನು ಹಾಜರು ಪಡಿಸಿದರು ಅವರಿಗೆ ಕೊಟ್ಟಿರುತ್ತೇವೆ . ನಿಪಿ–2 ಚೆಕ್ ನ್ನು ನಮ್ಮ ಬ್ಯಾಂಕಿಗೆ ಸೆಂಟ್ ಮಿಲಾಗ್ರಿಸ್ ಸೊಸೈಟಿಯವರು ಹಾಜರು ಪಡಿಸಿದರು . ಚೆಕ್ ಅಮಾನ್ಯವಾಗಿದೆ ಎಂದು ಸಿಟಿಎಸ್ ಗ್ರಿಡ್ ನವರು ನೀಡಿದ ಮಾಹಿತಿ ಪ್ರಕಾರ ನಮ್ಮ ಬ್ಯಾಂಕನವರು ನಿಪಿ –3 ರಂತೆ ಹಿಂಬರಹ ನೀಡಿದ್ದಾರೆ .

**<u>ಪಾಟೀ ಸವಾಲು : ಆರೋಪಿತನ ಪರವಾಗಿ : ಶ್ರೀ ಪಿ ಎಸ್ ಎನ್ ವಕೀಲರಿಂದ :</u>**

3. ಸಿಟಿಎಸ್ ಸಿಸ್ಟಮ್ 2017 ರಿಂದ ಪ್ರಾರಂಭವಾಗಿದೆ . ಸಿಟಿಎಸ್ ಸಿಸ್ಟಮ್ ಬರುವ ಮೊದಲು ಯಾವ ಬ್ಯಾಂಕಿನ ಚೆಕ್ ಇರುತ್ತದೆ ಆ ಬ್ಯಾಂಕಿಗೆ ಹೋಗುತ್ತಿತ್ತು ಎಂರದೆ ಸರಿಯಲ್ಲ . ಮೊದಲು ಕ್ಲಿಯರಿಂಗ್ ಸಿಸ್ಟಮ್ ಇತ್ತು ಕ್ಲಿಯರಿಂಗ್ ಸಿಸ್ಟಮ್ ನಲ್ಲಿ ಎಲ್ಲಾ ಬ್ಯಾಂಕುಗಳು ಸೇರಿ ಎಸ್ ಬಿ ಐ ನಲ್ಲಿ ಅಕೌಂಟ್ ಮೆಂಟೆನ್ ಮಾಡುತ್ತಿದ್ದರು. ಅಲ್ಲಿ ಚೆಕ್ ಎಕ್ಸೆಂಜ್ ಆಗುತ್ತಿದ್ದವು . ನಿಪಿ–2 ಚೆಕ್ ನೇರವಾಗಿ ನಮ್ಮ ಶಾಖೆಗೆ ಬಂದಿರುವಂತಹ ಚೆಕ್ ಅಲ್ಲ , ಸೆಂಟ್ ಮಿಲಾಗ್ರಿಸ್ ನವರು ಮಿರ್ಜಾನ ಶಾಖೆಗೆ ಸಲ್ಲಿಸಿರುವ ಚೆಕ್ . ಚೆಕ್ ನಗದೀಕರಣಕ್ಕಾಗಿ ಬಂದಾಗ ನಾನು ಶಾಖಾ ವ್ಯವಸ್ಥಾಪಕನಾಗಿರಲಿಲ್ಲ ಎಂದರೆ ಸರಿ . ಹಾಗಾಗಿ ಚೆಕ್ ನಗದೀಕರಣಕ್ಕಾಗಿ ಬಂದಾಗ ಏನೇನು ಕ್ರಮ ಕೈಗೊಂಡಿದ್ದಾರೆ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ .

4. ಸಿಟಿಎಸ್ ಸಿಸ್ಟಮ್ ಬಂದಾಗ ಮೊದಲಗೆ ಅಕೌಂಟ್ ನಲ್ಲಿ ಹಣ ಇದೆಯೋ ಇಲ್ಲವೋ ನೋಡುವುದು ಎಂದರೆ ಸರಿ . ಸಾಕಷ್ಟು ಹಣ ಇಲ್ಲವಾದರೆ ಫಂಡ್ಸ ಇನ್ ಸಫಿಶಿಯಂಟ್ ಎಂದು ಹಿಂಬರಹ ಕೊಡುತ್ತೇವೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಚೆಕ್ ಆ ಅಕೌಂಟಿಗೆ ನೀಡಲಾಗಿದೆಯೋ ಇಲ್ಲವೋ , ಆ ಪಾರ್ಟಿಗೆ ಸೇರಿದೆಯೋ ಇಲ್ಲವೋ ಚೆಕ್ ಮಾಡಲಾಗುತ್ತದೆ ಎಂದು ನುಡಿದಿರುತ್ತಾರೆ . ಅದು ಯಾವ ಬ್ಯಾಂಕಿನ ಚೆಕ್ ಆ ಬ್ಯಾಂಕಿನ ಶಾಖೆಯವರು ಮಾಡುತ್ತಾರೆ ಎಂದರೆ ಸರಿ .

<u>ಮರು ವಿಚಾರಣೆ :ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.